# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7994/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 02/03/2017
66

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ರಾಮದಾಸ್, ಹರ್ತಟ್ಟು, ಗಿಳಿಯಾರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ರಾಮದಾಸ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ಉಡುಪಿ ತಾಲ್ಲೂಕಿನ ಗಿಳಿಯಾರು ಗ್ರಾಮದ ಸರ್ವೇನಂ.172/7 ರಲ್ಲಿ 30 ಸೆಂಟ್ಸ್‌ನಷ್ಟು ಜಾಗ ದೂರುದಾರರ ಪತ್ನಿಯ ಹೆಸರಿನಲ್ಲಿದ್ದು, ಆ ಜಾಗದಲ್ಲಿ ಒಂದು ಮನೆಯನ್ನು ನಿರ್ಮಿಸಲಾಗಿರುತ್ತದೆ. ಸದರಿ ಜಾಗದ ಮಧ್ಯದಲ್ಲಾಗಲೀ ಅಥವಾ ಅಕ್ಕಪಕ್ಕದಲ್ಲಾಗಲೀ ವಿದ್ಯುತ್ ಸಂಪರ್ಕಕ್ಕೆ ಅನುಮತಿ ನೀಡಬಾರದೆಂದು, ವಿದ್ಯುತ್ ಕಂಬ ನೆಡಬಾರದೆಂದು ಕೋರಿ ದೂರುದಾರರು ಅರ್ಜಿ ಸಲ್ಲಿಸಿದ್ದರು, ರಸ್ತೆಯ ಬದಿಯಲ್ಲಿನ ಜಾಗದಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟಿರುತ್ತಾರೆ. ಅದರಲ್ಲಿ ಪೂರ್ವ ಭಾಗದ ಕಂಬವನ್ನು 1ನೇ ಎದುರುದಾರರು ಬಲವಂತದಿಂದ ತಳ್ಳಿದ್ದರಿಂದ ದೂರುದಾರರ ಮನೆ ಕಡೆಗೆ ವಾಲಿರುತ್ತದೆ ಹಾಗೂ ವಿದ್ಯುತ್ ಕಂಬದ ತಂತಿ ತೆಂಗಿನ ಮರಗಳ ಮಧ್ಯೆ ಹಾದು ಹೋಗಿರುತ್ತದೆ. ಸದರಿ ಕಂಬದಿಂದ ಮನುಷ್ಯರಿಗೆ ಮತ್ತು ಜಾನುವಾರುಗಳಿಗೆ ಅನಾಹುತ ತಪ್ಪಿದಲ್ಲ, ಸದರಿ ಕಂಬವು ಬೀಳುವ ಪರಿಸ್ಥಿತಿಯಲ್ಲಿರುತ್ತದೆ. ಈ ಬಗ್ಗೆ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಆದೇಶ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರ ಆಕ್ಷೇಪಣೆಯನ್ನು ಕರೆಯಲಾಗಿದ್ದು ಹಾಗೆಯೇ ಸದರಿ ದೂರಿನ ಪ್ರತಿಯನ್ನು ಈ ಸಂಸ್ಥೆಯ ಉಡುಪಿಯ ಆರಕ್ಷಕ ಉಪಾಧೀಕ್ಷಕರಿಗೆ ರವಾನಿಸಿ ತನಿಖಾ ವರದಿಯನ್ನು ನೀಡುವಂತೆ ಕೋರಲಾಗಿದ್ದು, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ ಹಾಗೂ ತನಿಕಾಧಿಕಾರಿಯವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿದ್ದು, ಸದರಿ ತನಿಖಾ ವರದಿಯಲ್ಲಿ ಆರಕ್ಷಕ

ಉಪಾಧೀಕ್ಷಕರು ದೂರುದಾರರು ಮಾಡಿರುವ ಆರೋಪಗಳು ಸರಿ ಎಂದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಎದುರುದಾರಗುಳು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಮನೆಯ ಬಳಿ ಇದ್ದ ವಿದ್ಯುತ್ ಕಂಬವು ಬಾಗಿರುವುದನ್ನು ನೆಟ್ಟಗೆ ನಿಲ್ಲಸಲಾಗಿರುತ್ತದೆ. ಸದರಿ ವಿದ್ಯುಚ್ಛಕ್ತಿ ತಂತಿಗೆ ತೆಂಗಿನ ಮರದ ಎಲೆಯು ತಾಗುತ್ತಿದ್ದು, ಅದರಿಂದ, ತೊಂದರೆಯಾಗುತ್ತಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದು ಮರವನ್ನು ತೆಗೆಯಲು ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ. ಈ ಬಗ್ಗೆ ಎದುರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಎದುರುದಾರರು ಪ್ರತ್ಯುತ್ತರವನ್ನು ಸಲ್ಲಿಸಿ ದೂರುದಾರರ ಮನೆಯ ದಕ್ಷಿಣ ಭಾಗದಲ್ಲಿ ರಾಘವೇಂದ್ರ ಆಚಾರ್ಯ ಎನ್ನುವವರು ಮೂರು ವರ್ಷಗಳ ಹಿಂದೆ ಮನೆಯೊಂದನ್ನು ನಿರ್ಮಿಸಿದ್ದು, ಮನೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಂಡಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕವು ದೂರುದಾರರ ಮನೆಯ ಬಳಿ ಹಾದು ಹೋಗುವುದರಿಂದ, ಈ ಬಗ್ಗೆ ಆಕ್ಷೇಪವನ್ನು ದೂರುದಾರರು ಸಲ್ಲಿಸಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕ ದೂರುದಾರರ ಜಾಗದಲ್ಲಿ ಹಾದು ಹೋಗುವುದರಿಂದ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಹಾಗೂ ಅವರು ನೀಡಿರುವ ಉತ್ತರಗಳು ಆರಿಕೆ ಉತ್ತರಗಳಾಗಿರುತ್ತದೆ ಎಂದು ಹಾಗೂ ಅವರುಗಳು ಯಾವುದೋ ಆಮಿಷಕ್ಕೆ ಒಳಗಾಗಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

3. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ತನಿಖಾ ವರದಿಯನ್ನು ಪರಿಶೀಲಿಸಿದಲ್ಲಿ ಶ್ರೀ ರಾಘವೇಂದ್ರ ಆಚಾರ್ ಇವರ ವಾಸದ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿಸ್ತರಿಸಿದ ಸಿಂಗಲ್ ಫೇಸ್ ಎಲ್‌ಟಿ ವಿದ್ಯುತ್ ಲೈನ್ ಹಾಗೂ ಕಂಬವನ್ನು ಶ್ರೀ ವಾಸುದೇವ ಮೈಯ ಇವರಿಗೆ ಸೇರಿದ ಜಾಗದಲ್ಲಿ ಅಳವಡಿಸಲಾಗಿದೆ. ಶ್ರೀ ರಾಮ್‌ದಾಸ್ (ದೂರುದಾರರು) ಇವರ ಜಾಗದಲ್ಲಿ ನೆಟ್ಟಿರುವ ತೆಂಗಿನ ಮರಗಳು ಸದರಿ ವಿದ್ಯುತ್ ಲೈನ್‌ನಿಂದ ಸುಮಾರು 3.50 ಅಡಿಗಳ ಅಂತರದಲ್ಲಿ ಇರುತ್ತದೆ ಎಂದು ಸದರಿ ತೆಂಗಿನ ಮರಗಳು ಶ್ರೀ ರಾಮದಾವ್ ರವರ ಜಾಗದ ಹೊರಗಡೆ ವಾಲಿಕೊಂಡಿದ್ದು, ಸದರಿ ತೆಂಗಿನ ಮರದ ಸೋಗೆಗಳು ವಿದ್ಯುತ್ ಮಾರ್ಗಕ್ಕೆ ತಾಗಿಕೊಂಡಿರುತ್ತದೆ. ಈ ಬಗ್ಗೆ ದೂರುದಾರರು ಆಕ್ಷೇಪಣೆ ವ್ಯಕ್ತಪಡಿಸಿರುವುದು ಸ್ಪಷ್ಟ ಪಡುತ್ತದೆ. ಉಡುಪಿಯ ಈ ಸಂಸ್ಥೆಯ ಆರಕ್ಷಕ ಅಧೀಕ್ಷಕರು ತನಿಖಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ದೂರುದಾರರ ಅರ್ಜಿಗೆ ಸಂಬಂಧಿಸಿದಂತೆ, ದೂರುದಾರರ ಜಾಗದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿ ಅಳವಿಡಿಸಿರುವ ಉಡುಪಿ ತಾಲ್ಲೂಕು ಇಳಿಯಾರು ಗ್ರಾಮದ ಹರ್ತಟ್ಟು ಎಂಬಲ್ಲಿಗೆ ದಿನಾಂಕ 25/01/2016 ರಂದು ಭೇಟಿ ನೀಡಿ ಸ್ಥಳಪರಿಶೀಲಿಸಿರುವುದಾಗಿಯೂ, ಶ್ರೀ ರಾಮದಾಸ್ ರವರ ಮನೆಯ ಪೂರ್ವ ದಿಕ್ಕಿನಲ್ಲಿ ಅವರ ಜಾಗ ಹಾಗೂ ತೆಂಗಿನ ತೋಟ ಇರುತ್ತದೆ ಎಂದು ತೋಟದ ಪೂರ್ವ ಬದಿಯಲ್ಲಿ ಗದ್ದೆಯ ಬದುವಿದ್ದು, ಸದರಿ ಬದುವಿನ ಮಧ್ಯದಲ್ಲಿ ಪೂರ್ವ ದಿಕ್ಕಿನಲ್ಲಿ ಒಂದು ಸಿಮೆಂಟ್ ನ ವಿದ್ಯುತ್ ಕಂಬ ಇರುತ್ತದೆ. ಸದರಿ

ಸಿಮೆಂಟ್ ವಿದ್ಯುತ್ ಕಂಬವನ್ನು ಹೂಳಿದ ಜಾಗದಲ್ಲಿ ಸುಮಾರು 1.00 ಅಡಿಯಷ್ಟು ಅಂತರದಲ್ಲಿ ಕಂಬ ಪೂರ್ವಕ್ಕೆ ವಾಲಿ ಕೊಂಡಿರುತ್ತದೆ. ಸದರಿ ಕಂಬಕ್ಕೆ ದಕ್ಷಿಣೋತ್ತರವಾಗಿ ವಿದ್ಯುತ್ ತಂತಿಯನ್ನು ಜೋಡಣೆ ಮಾಡಿ ಎಳೆದಿರುವುದಾಗಿ ಕಂಡು ಬಂದಿರುತ್ತದೆ. ಸದರಿ ವಿದ್ಯುತ್ ಕಂಬಕ್ಕೆ ಅಳವಡಿಸಿರುವ ವಿದ್ಯುತ್ ಲೈನಿನ್ ದಕ್ಷಿಣ ಭಾಗಕ್ಕೆ ಸ್ವಲ್ಪ ಪಿವಿಸಿ ಪೈಪ್ ಅಳವಡಿಸಿರುವುದು ಕಂಡು ಬರುತ್ತದೆ. ಸದರಿ ವಿದ್ಯುತ್ ತಂತಿಯ ಉತ್ತರ ದಿಕ್ಕಿನಿಂದ ಅಂದರೆ ಶ್ರೀ ವಾಸುದೇವ ಮಯ್ಯರವರ ಗದ್ದೆಯ ಬದುವಿನಿಂದ ಅರ್ಜಿದಾರ ರಾಮದಾಸ್ ರವರ ಪೂರ್ವ ಬದಿಯ ಹಂಚಿನ ಮೇಲ್ಭಾಗದಲ್ಲಿ ದಕ್ಷಿಣ ದಿಕ್ಕಿಗೆ ಹಾದುಹೋಗಿ ಶ್ರೀಮಹಾಬಳ ಪೂಜಾರಿಯವ ಗದ್ದೆಯ ಪಶ್ಚಿಮ ಬದಿಯ ಬದು ಮೂಲಕ ದಕ್ಷಿಣಕ್ಕೆ ಹಾದೂ ಹೋಗಿ ನಂತರ ಪಶ್ಚಿಮ ದಿಕ್ಕಿಗೆ ತಿರುಗಿಸಿ ಶ್ರೀ ರಾಘವೇಂದ್ರ ಆಚಾರಿಯವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದು ಕಂಡು ಬಂದಿರುತ್ತದೆ. ಇದರಿಂದ, ಶ್ರೀ ವಾಸುದೇವ ಮಯ್ಯರವರ ಗದ್ದೆಯ ಬದುವಿನ ಮೇಲ್ಭಾಗದಲ್ಲಿ ವಿದ್ಯುಚ್ಛಕ್ತಿ ತಂತಿ ಹಾದು ದೂರುದಾರರಾದ ಶ್ರೀ ರಾಮದಾಸ್‌ರವರ ತೋಟದ ಪೂರ್ವ ಬದಿಯಲ್ಲಿ ಹಾದು ವಿದ್ಯುತ್ ತಂತಿಯು ಶ್ರೀ ರಾಘವೇಂದ್ರ ಆಚಾರಿರವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ತಂತಿಯಾಗಿರುತ್ತದೆ. ಇದರಿಂದ ಶ್ರೀ ರಾಮದಾಸ್ ರವರ ತೆಂಗಿನ ತೋಟದ ಮೂರು ಪಸಲುಗಳು ಬರುತ್ತಿರುವ ತೆಂಗಿನ ಮರಗಳ ಗರಿಗಳು ವಿದ್ಯುತ್ ತಂತಿಗೆ ತಾಗಿರುವುದು ಕಂಡು ಬರುತ್ತದೆ. ಇದರಿಂದ ತೆಂಗಿನ ಮರ ಹತ್ತಿ ತೆಂಗಿನ ಕಾಯಿ ಕೊಯಿವ ಸಮಯದಲ್ಲಿ ವಿದ್ಯುತ್ ತಾಗಿ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ, ದೂರುದರರು ತೆಂಗಿನ ಕಾಯಿಯನ್ನು ಕೀಳದೆ ಹಾಗೆ ಬಿಟ್ಟಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಇದಲ್ಲದೇ, ವಿದ್ಯುತ್ ತಂತಿ ಅಳವಡಿಸಿರುವ ಮಾರ್ಗದಲ್ಲಿ ಜನರು ನಡೆದಾಡುವ ಗದ್ದೆಯ ಬದು ಇದ್ದು, ಪಕ್ಕದಲ್ಲಿಯೇ ತೆಂಗಿನ ಮರ ಇದ್ದು, ಅದರ ಸೋಗೆ ವಿದ್ಯುತ್ ತಂತಿಗೆ ತಗುಲಿ ವಿದ್ಯುತ್ ಅಪಘಾತ ಆಗುವ ಸಾಧ್ಯತೆ ಕೂಡ ಇರುತ್ತವೆ ಎಂದು ಆದ್ದರಿಂದ, ಜಮೀನಿನ ಅಂಚಿನಲ್ಲಿರುವ ವಿದ್ಯುತ್ ಕಂಬವು ಬುಡದಿಂದ ಸ್ವಲ್ಪ ಪೂರ್ವ ದಿಕ್ಕಿಗೆ ಬಾಗಿದ್ದು, ಅಪಾಯಕಾರಿಯಾಗಿ ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ಮಾಡಿರುವ ಆರೋಪಗಳು ಸಾಬೀತಾಗಿರುವುದು ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಮೆಸ್ಕಾಂ ಸಂಸ್ಥೆಯವರು ಸೂಕ್ತ ಕ್ರಮ ಜರುಗಿಸಲು ಮೇಲಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿರುವುದಾಗಿ ತಿಳಿಸಿರುತ್ತಾರೆ.

4. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕಿನ ಗಿಳಿಯಾರು ಗ್ರಾಮದ ಸರ್ವೇನಂ.172/7 ರಲ್ಲಿ ದೂರುದಾರರ ಜಾಗದ ರಸ್ತೆಯ ಬದಿಯಲ್ಲಿನ ಜಾಗದಲ್ಲಿ ನೆಟ್ಟಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಹಾಗೂ ಸದರಿ ವಿದ್ಯುತ್ ಕಂಬದಿಂದ ಎಳೆಯಲಾದ ಸಂಪರ್ಕ**

**ತಂತಿಯಿಂದ ಅಕ್ಕಪಕ್ಕದಲ್ಲಿ ಇರುವ ಮರಗಳಿಗೆ ತಾಗಿ ವಿದ್ಯುತ್ ಅವಘಡವನ್ನು ತಪ್ಪಿಸಲು ಕಾನೂನು ರೀತ್ಯ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/3/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**